ಈ ಸಾಕ್ಷಿಯನ್ನು ದಿನಾಂಕಃ 18.07.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ನಾನು ಈ ದಿನ ನನಗೆ ನೀಡಿರುವಂತಹ ಅಧಿಕಾರ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಆರ್-1 ಎಂದು ಗುರುತಿಸಲಾಯಿತು. ಇನ್ಸೂರೆನ್ಸ್ ಪಾಲಿಸಿಯ ಪ್ರಮಾಣೀಕೃತ ಹಾಜರು ಪಡಿಸಿದ್ದು ಅದನ್ನು ನಿಆರ್-2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದ

ಈ ಅಪಘಾತಕ್ಕೆ ಸಂಬಂಧಪಟ್ಟಂತೆ ಬೇರೆ ಎರಡು ಕೇಸುಗಳಲ್ಲಿ ಜಡ್ಜ್‌ಮೆಂಟ್ ಆಗಿ ಅವಾರ್ಡ್ ಅಮೌಂಟನ್ನು ಡೆಪಾಸಿಟ್ ಮಾಡಿದ್ದೇವೆ ಎಂದರೆ ಸರಿ. ಈ ಪ್ರಕರಣದಲ್ಲಿ ಯಾರ ಯಾರ ವಿಚಾರಣೆಯಾಗಿದೆ ಎಂದು ತಿಳಿದುಕೊಂಡಿದ್ದೇನೆ. ಪಿಡಬ್ಲ್ಯೂ-2 ರವರ ವಿಚಾರಣೆಯಾದ ಬಗ್ಗೆ ಗೊತ್ತು. ಪಿಡಬ್ಲ್ಯೂ-2 ರವರು ನಿಪಿ-6ನ್ನು ನಾನೇ ಕೊಟ್ಟಿರುವುದಾಗಿ ಒಪ್ಪಿಕೊಂಡಿದ್ದಾರೆಂದರೆ ಸಾಕ್ಷಿಯು ನಿಪಿ-6 ಬರೀ ಇನ್ ವಾಯ್ಸ್ ಇರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ವಾಹನಕ್ಕೆ ಡ್ಯಾಮೇಜ್ ಆದ ಬಗ್ಗೆ ಮತ್ತು ರಿಪೇರಿ ಬಾಬ್ತು ಬಗ್ಗೆ ತನಿಖೆ ಮಾಡಿ ತಿಳಿದುಕೊಳ್ಳಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಪರಿಹಾರ ಪಡೆಯಲು ಅರ್ಜಿದಾರರೇ ಫೈನಲ್ ಬಿಲ್ಲನ್ನು ಕೊಡಬೇಕೆಂದು ಉತ್ತರಿಸುತ್ತಾರೆ. ನಾನು ಬಾಧ್ಯತೆಯನ್ನು ತಪ್ಪಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಪರಿಹಾರವನ್ನು ಕೊಡವುದನ್ನು ತಪ್ಪಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ,
ಓ ಹೇ ಕೇ ಸರಿ ಇದೆ,

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ